FERTILISERS IN THE STATE MARKETING SOCIETY

63. Sri C. K. RAJAIAH SHETTY (Chicknaikanahalli).—

Will the Minister for Development be pleased to state:—

(*a*) the quantity and value of fertilisers in the State Marketing Society as per latest available figures;

(*b*) the interest paid by the said Society to Government, to different Banks and to any other financing body since 3 years up to latest convenient date;

(*c*) the profit or loss since the last 3 years up to a latest convenient date (Yearwise);

(*d*) the share capital of Government in this society?

Sri B. L. GOWDA (Deputy Minister for Development).—

(*a*) 2,67,790 M. Tons. Valued at Rs. 19,37,70,695 as on 15th November 1969.

(*b*) Rs. 17,37,032-51 up to the end of October 1969.

(*c*) 1965-66 Loss Rs. 6,73,367-92.
1966-67 Profit Rs. 18,43,331-52.
1967-68 Profit Rs. 2,47,964-20.

(*d*) Rs. 1,09,72,700 as on 30th November 1969.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಒಂದು ಕೋಟಿ 9 ಲಕ್ಷ ಚಿಲ್ಲರೆ ಬಂಡವಾಳ ಹಾಕಿದ್ದೀರಿ. ಕಳೆದ ಎರಡು ವರ್ಷಗಳಿಂದ ಇದಕ್ಕೆ ಎಷ್ಟು ಬಡ್ಡಿ ಕೊಟ್ಟಿದ್ದಾರೆ.

† ಶ್ರೀ ಬಿ. ಎಲ್. ಗೌಡ.—ಷೇರ್ ಬಂಡವಾಳ ಹಾಕಿದ್ದಾರೆ. ಅಲ್ಲಿ ಎಷ್ಟು ಬಡ್ಡಿ ಕೊಟ್ಟ ರೆಂಬ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕಳೆದ ಎರಡು ವರ್ಷಗಳಲ್ಲಿ ಡಿವಿಡೆಂಡ್ ಹಂಚಿಲ್ಲವೆ? ಸರ್ಕಾರಿ ಷೇರ್ ಮೇಲೆ ಲಾಭ ಎಷ್ಟು, ಎಷ್ಟು ಅಜಪ್ಟ್ ಆಗಿದೆ?

ಶ್ರೀ ಬಿ. ಎಲ್. ಗೌಡ.—1965-66 ರಲ್ಲಿ ನಷ್ಟವಾಗಿರುವುದು 6,73,367-92, ರೂಪಾಯಿ ಗಳು 1966-67 ರಲ್ಲಿ ಆಗಿರುವ ಲಾಭ 18,43,371—52 ರೂಪಾಯಿ, 1967-68 ರಲ್ಲಿ ಆಗಿರುವ ಲಾಭ 2,87,964-20 ರೂಪಾಯಿಗಳು.

ಶ್ರೀ ಎನ್. ಎ. ಚನ್ನೇಗೌಡ.—1966-67 ರಲ್ಲಿ ಲಾಭ ಬಂದಿದೆ ಎಂದು ಹೇಳುತ್ತೀರಿ. 1965-66 ರಲ್ಲಿ ನಷ್ಟವಾಗಿದೆ. ಪ್ರತಿ ವರ್ಷ ಬೆಲೆ ಹೆಚ್ಚಾಗುತ್ತಾ ಇದೆ. ಅದುದರಿಂದ ನಷ್ಟ ವಾಗುವುದಕ್ಕೆ ಕಾರಣವೇನು?

ಶ್ರೀ ಬಿ. ಎಲ್. ಗೌಡ.—ಅಲ್ಲಿ ಹೆಚ್ಚಾಗಿ ಗೊಬ್ಬರವನ್ನು ಸ್ಟಾಕ್ ಮಾಡಿಕೊಂಡಿರುವುದರಿಂದ, ಮತ್ತು ಅದಕ್ಕೆ ಬಡ್ಡಿ ಕೊಡಬೇಕಾಗಿರುವುದರಿಂದ ನಷ್ಟವಾಗಿದೆ.

Sri BAPU GOWDA.—I want to know whether the profit shown for the year 1967-68 is net profit or the gross profit?

Sri B. L. GOWDA.—It is the net profit.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸಹಕಾರ ಸಂಸ್ಥೆಗಳಲ್ಲಿ ಕೊಳ್ಳುವ ಗೊಬ್ಬರಕ್ಕೂ ಮಾರುವ ಗೊಬ್ಬರಕ್ಕೂ ಒಂದು ಟನ್ನಿಗೆ ಇರುವ ಅಂತರವೇನು?

ಶ್ರೀ ಬಿ. ಎಲ್. ಗೌಡ.—ಇಂಡಿಯಾ ಸರ್ಕಾರದ ಆದೇಶದ ಮೇರೆಗೆ 55 ರೂಪಾಯಿಗಳಿಗಿಂತ ಹೆಚ್ಚಿಗೆ ಮಾರ್ಜಿನ್ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಗೊಬ್ಬರವನ್ನು ಕೊಳ್ಳುವ ದರವೆಷ್ಟು ಮತ್ತು ಮಾರುವ ದರವೆಷ್ಟು ಎಂಬುದಾಗಿ ನಾನು ಕೇಳಿದ್ದು.

ಶ್ರೀ ಬಿ. ಎಲ್. ಗೌಡ.—ನಾನಾ ವಿಧವಾದ ಗೊಬ್ಬರಗಳಿವೆ. ಒಟ್ಟಿನಲ್ಲಿ 35 ರೂಪಾಯಿಗಳಿಂದ 55 ರೂಪಾಯಿಗಳಿಗಿಂತ ಹೆಚ್ಚಿಗೆ ಮಾರ್ಜಿನ್ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—1965-66 ರಲ್ಲಿ ಲುಕ್ಸಾನು ತೋರಿಸಿದ್ದೀರಿ. 1967 68ನೇ ಸಾಲಿನಲ್ಲಿ ಲಾಭ ತೋರಿಸಿದ್ದೀರಿ. ಇದಕ್ಕೆ ಮೂಲಕಾರಣ ಕೊಂಡ ಬೆಲೆಗಿಂತ ಮಾರಾಟದ ಬೆಲೆ ಜಾಸ್ತಿಯಾಗಿರುವದಲ್ಲವೇ? ಇದರಲ್ಲಿ ಸೂಪರ್‌ಏಷನ್ ಧಾರಣೆಯನ್ನು ಹೆಚ್ಚು ಮಾಡಿರುವುದು ಕಾರಣವಲ್ಲವೇ?

ಶ್ರೀ ಬಿ. ಎಲ್. ಗೌಡ.—1965-66 ರಲ್ಲಿ ಒಂದು ಟನ್ನಿಗೆ 6 ರೂಪಾಯಿಗಳು ಇತ್ತು. ಈಗ 15 ರೂಪಾಯಿಗಳಾಗಿದೆ. ಆಗ ಕಡಿಮೆ ಇದ್ದುದರಿಂದ ಲುಕ್ಸಾನು ಆಗಿದೆ.

ಶ್ರೀ ಬಿ. ಪಿ. ಗಂಗಾಧರ್.—ಉತ್ತರದಲ್ಲಿ ನಮೂದಿಸಿರುವಂತೆ ನುಮಾರು 17 ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ಆ ಸಂಘವವರು ಕೊಟ್ಟಿದ್ದಾರೆ. ಇಷ್ಟು ಅನ್ಯಾಯವಾಗಿ ಅದನ್ನು ಕೊಡುವುದಕ್ಕೆ ಬದಲಾಗಿ ಯಾಪ್ಯಾವ ಏರಿಯಾದಲ್ಲಿ ಎಷ್ಟೆಷ್ಟು ಅದನ್ನು ಕನ್‌ಸ್ಯೂಮ್ ಮಾಡುತ್ತಾರೆ, ಎಷ್ಟೆಷ್ಟು ಬೇಕಾಗುತ್ತದೆಂದೇನಾದರೂ ಅಂಕಿ ಅಂಶಗಳನ್ನು ತೆಗೆಯಿಸಿಕೊಂಡು ಅದರ ಬೇಸಿಸ್ ಮೇಲೆ ಈ ಫಿಗರನ್ನು ಕರೆಕ್ಟ್ ಮಾಡಿದ್ದೀರಾ?

ಶ್ರೀ ಬಿ. ಎಲ್. ಗೌಡ.—ಗೊಬ್ಬರವನ್ನು ಸ್ಟಾಕ್ ಮಾಡುವ ಕಾಲದಲ್ಲಿ ವ್ಯವಸಾಯ ಇಲಾಖೆಯಲ್ಲಿ ಬೇಡಿಕೆ ಜಾಸ್ತಿ ಇತ್ತು. ಇತ್ತೀಚೆಗೆ ಆ ಬೇಡಿಕೆ ಕಡಿಮೆಯಾಗಿದೆ. ಆದ್ದರಿಂದ ಈ ಫಿಗರ್ಸ್ ಸರಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ರಾಸಾಯನಿಕ ಗೊಬ್ಬರದ ಪ್ರಮಾಣ 15-11-1969 ರಂದು ಇದ್ದ ರೀತ್ಯಾ 2,67,790 ಮೆಟ್ರಿಕ್ ಟನ್ನುಗಳು ಎಂದು ಉತ್ತರದಲ್ಲಿ ಹೇಳಿದ್ದೀರಿ. 1969ನೇ ಇಸವಿ ಅಕ್ಟೋಬರ್ ಮಾಹೆಯ ಅಂತ್ಯದವರೆಗೆ 17 ಲಕ್ಷ 37 ಸಾವಿರ ರೂಪಾಯಿಗಳು ಚಿಲ್ಲರೆಯಷ್ಟು ಬಡ್ಡಿಯ ಹಣವನ್ನು ಆ ಸಂಘದವರು ಕೊಟ್ಟಿದ್ದಾರೆಂದು ಹೇಳಿದ್ದೀರಿ. ನನಗೆ ತಿಳಿದಮಟ್ಟಿಗೆ ಗೊಬ್ಬರದ ಬೇಡಿಕೆ ಅಷ್ಟು ಪ್ರಮಾಣದಲ್ಲಿ ಈ ರಾಜ್ಯದಲ್ಲಿ ಇಲ್ಲದಿದ್ದರೂ ಕೂಡ ಯಾರೋ ಒಬ್ಬರ ಪ್ರತಿಷ್ಠೆ ಅಥವಾ ಒಬ್ಬ ವ್ಯಕ್ತಿಯ ಪ್ರಭಾವಕ್ಕೊಳಗಾಗಿ ಈ ಕೋಆಪರೇಟಿವ್ ಸೊಸೈಟಿಯವರು ಈ ಹಣವನ್ನು ಅಲ್ಲಿ ಪೆಚ್ಚ ಮಾಡಿ ಎಲ್ಲಾ ಗೋಡೌನುಗಳಲ್ಲಿಯೂ ಗೊಬ್ಬರವನ್ನು ತುಂಬಿಟ್ಟುಕೊಂಡು ನಷ್ಟವನ್ನು ಅನುಭವಿಸುತ್ತಿದ್ದಾರೆ. ಅದನ್ನು ಇನ್ನೂ ಪೂರ್ತಿ ಮಾರಾಟ ಮಾಡುವುದಕ್ಕೆ ಆಗದೆ ಕೊಂಡಬೆಲೆಯ ಮೇಲೆ 34 ರೂಪಾಯಿಗಳನ್ನು ಜಾಸ್ತಿ ಮಾಡಿ ಗೋಡೌನ್ ಮತ್ತು ಇತರ ಚಾರ್ಜುಗಳೆಂದು ಹೇಳಿ ರೈತರಿಗೆ ನಷ್ಟವುಂಟು ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಹೇಳಿದ ಹಾಗೆ ಇಲ್ಲ. ವ್ಯವಸಾಯ ಇಲಾಖೆಯ ಮುಖ್ಯಾಧಿಕಾರಿಗಳ ಆದೇಶದಂತೆ ಅದನ್ನು ಮುಂದೆ ಸರ್ಕಾರದವರು ತರಿಸಿಕೊಡುತ್ತಾರೆ. ಮಾರ್ಕೆಟಿಂಗ್ ಸೊಸೈಟಿಯವರು ಯಾರಿಗೂ ಅಷ್ಟು ನಷ್ಟವನ್ನುಂಟುಮಾಡಲಿಲ್ಲ.

ಶ್ರೀ ಎಂ. ಬಸವರಾಜು.—ಗೊಬ್ಬರದ ಮಾರಾಟದ ಬೆಲೆಯಿಂದ ಈಗ ಗ್ರೀನ್ ರೆವಲ್ಯೂಷನ್ನಿಗೆ ಅಡ್ಡಿಯಾಗಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಲ್. ಗೌಡ.—ಹಾಗೇನೂ ಇಲ್ಲ.

ಶ್ರೀ ಎಂ. ನಾಗಪ್ಪ.—ಉಪಪ್ರಶ್ನೆಗೆ ಉತ್ತರವಾಗಿ ಇದರ ಬೆಲೆಯನ್ನು 6 ರೂಪಾಯಿಗಳಿಗೆ ಬದಲಾಗಿ 15 ರೂಪಾಯಿಗಳಂತೆ ಹೆಚ್ಚು ಮಾಡಿದ್ದರಿಂದ ಲಾಭ ಬರುತ್ತಿದೆಯೆಂದು ಹೇಳಿದ್ದಾರೆ. 15 ರೂಪಾಯಿಗಳಷ್ಟು ಮಾಡುವ ಪರಿಸ್ಥಿತಿಯೇನು? ಇದನ್ನು ರೈತರಿಗೆ ಲಾಭವಾಗುವ ದೃಷ್ಟಿಯಿಂದ ಮಾಡಿದ್ದೀರಾ?

ಶ್ರೀ ಬಿ. ಎಲ್. ಗೌಡ.—ಸರ್ಕಾರಕ್ಕೆ ಸಹಕಾರ ಸಂಘಗಳಿಂದ ಲಾಭ ಮಾಡುವ ಉದ್ದೇಶವಿಲ್ಲ. ಅವರು ಬರುವ ಉತ್ಪನ್ನದಲ್ಲಿ ಎಕ್ಸ್‌ಪೆಂಡಿಚರನ್ನು ಮಿಟ್ ಮಾಡುವುದಕ್ಕಾಗುವುದಿಲ್ಲ. ಅದರಿಂದ ಅದನ್ನು ಜಾಸ್ತಿ ಮಾಡಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ನಹಕಾರ ತತ್ವದ ಪ್ರಕಾರ ಹೆಚ್ಚು ಲಾಭವೂ ಆಗಬಾರದು, ಹೆಚ್ಚು ನಷ್ಟವೂ ಆಗಬಾರದು. ಕೆಲವು ವರ್ಷಗಳಲ್ಲಿ ಇಲ್ಲಿ ವಿಶೇಷ ನಷ್ಟವೂ, ವಿಶೇಷ ಲಾಭವೂ ಆಗಿದೆ. ಗ್ರಾಹಕರಿಗೆ ಇದರಿಂದ ಹೆಚ್ಚಿನ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ಎರಡನೇ ವರ್ಷದಲ್ಲಿ ಹೆಚ್ಚು ಸ್ಟಾಕ್ ಇದ್ದುದು ಖರ್ಚಾಗಲಿಲ್ಲ. ಅದರಿಂದ ಬಹಳ ಲುಕ್ಸಾನು ಆಗುತ್ತಿದೆ.

Sri H. SIDDAVEERAPPA.—Is the hon. Deputy Minister aware that when this question came up before the Resources Committee there was a regular clash between the Minister for Agriculture and the Minister for Co-operation and the Agriculture Minister stated that because the co-operative department has butted in all these losses have been incurred. Unnecessarily why is the Deputy Minister blaming the Director of Agriculture for this ?

Mr. SPEAKER.—The Hon. Member has made reference to the confidential proceedings of the Resources Committee.

Sri H. SIDDAVEERAPPA.—I am not disclosing anything. May I know that this rub has arisen because the Co-operation Department wants to take more ill-gotten money and not allowing the Agriculture Department to involve in it ?

Sri B. L. GOWDA.—I repudiate the allegation made by the hon. Member.

ಶ್ರೀ ಐ. ಸೋಮಶೇಖರಪ್ಪ.—ಈಗ ಇರತಕ್ಕ ಗೊಬ್ಬರದ ಸ್ಟಾಕ್ ವ್ಯವಸಾಯ ಇಲಾಖೆಗೆ ಹಾಗೂ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದೆಯಾದ್ದರಿಂದ ಸರ್ಕಾರದವರು ಕೇವಲ 5 ರೂಪಾಯಿಗಳ ಲಾಭಕ್ಕೆ ಕೊಟ್ಟಿದ್ದಾರೆ. ಅದೇ ರೀತಿ ಮಾರ್ಕೆಟಿಂಗ್ ಸೊಸೈಟಿಗಳಿಗೂ ಕೊಡುವುದಕ್ಕೆ ತಯಾರಾಗಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಅದನ್ನು ಅವರಿಗೆ ವ್ಯವಸಾಯ ಇಲಾಖೆಯವರು ತರಿಸಿಕೊಡುತ್ತಾರೆ. ಅವರು 5 ರೂಪಾಯಿಗಳಂತೆ ತರಿಸಿಕೊಡಬೇಕೆಂದು ತಕ್ಕ ಸೂಚನೆಗಳನ್ನು ಕೊಟ್ಟಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟು ಗೊಬ್ಬರವನ್ನು ಶೇಖರಣೆ ಮಾಡುವ ಬಗ್ಗೆ ಕೋ-ಆಪರೇಟಿವ್ ಸೊಸೈಟಿಯಲ್ಲಿ ಡೈರೆಕ್ಟರ್ಸ್ ಸೇರಿ ಈ ರೀತಿ ಮಾಡಬೇಕೆಂದು ಸಲಹೆ ಮಾಡಿದ್ದಾರೆಯೇ ? ಅಥವಾ ಇವರ ಇಚ್ಛಾನುಸಾರವಾಗಿ ಮಾಡಿದ್ದಾರೆಯೇ ? ಎರಡನೆಯದು ಕೋ-ಆಪರೇಟಿವ್ ಸೊಸೈಟಿಯವರು ರೈತರು ಹೇಳಿದಂತೆ ಕೆಲಸ ಮಾಡುತ್ತಾರೋ ಅಥವಾ ಡೈರೆಕ್ಟರ್ಸ್ ಹೇಳಿದಂತೆ ಕೆಲಸ ಮಾಡುತ್ತಾರೋ ?

ಶ್ರೀ ಬಿ. ಎಲ್. ಗೌಡ.—ಇದರ ಕಾರ್ಯ ನಡವಳಿಕೆ ಈ ರೀತಿ ಇದೆ. ವ್ಯವಸಾಯ ಇಲಾಖೆ ಮುಖ್ಯಾಧಿಕಾರಿಗಳು ಗೊಬ್ಬರ ಹೇಗೆ ತರಿಸಬೇಕೆಂಬುದನ್ನು ನಮೂದು ಮಾಡಿದ್ದಾರೆ. ಇದರ ಪ್ರಕಾರ ತರಿಸುತ್ತಾರೆ.

Sri H. M. CHANNABASAPPA.—I want to know whether this Co-operative society functions under the directions of the Government Officers or under the directions and guidance of the Directors of the Society ?

Sri B. L. GOWDA.—The technical guidance of the departmental officers are taken.

ಶ್ರೀ ಸಿದ್ದಯ್ಯ ಕಾತೀಮಠ.—ರಾಜ್ಯದ ಮಾರಾಟ ಸಂಘಗಳಲ್ಲಿ ಶೇಖರಿಸಿದ ರಾಸಾಯನಿಕ ಗೊಬ್ಬರದ ಬೆಲೆ ಖಾಸಗೀ ಮಾರಾಟ ಸಂಘಗಳ ಬೆಲೆಗಿಂತ ಹೆಚ್ಚಾಗಿದೆ. ಅದನ್ನು ಸರಿಪಡಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಆ ವಿಚಾರವನ್ನು ಪರಿಶೀಲನೆಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗ 2, 67, 790 ಮೆಟ್ರಿಕ್ ಟನ್ನುಗಳಷ್ಟು ಗೊಬ್ಬರ ಸೊಸೈಟಿಗಳಲ್ಲಿದೆ. ಅದರ ಬೆಲೆ ಸುಮಾರು 19½ ಕೋಟಿ ರೂಪಾಯಿಗಳು ಎಂಬುದಾಗಿ ಹೇಳಿದ್ದಾರೆ. ಅವರು ಈಗಾಗಲೇ ಬಡ್ಡಿ ಕೊಟ್ಟಿರುವುದು ಸುಮಾರು 17½ ಲಕ್ಷ ರೂಪಾಯಿಗಳು. ಈಗ ಆ ಸಂಘಗಳಲ್ಲಿ ರಾಸಾಯನಿಕ ಗೊಬ್ಬರವನ್ನು ಇಲ್ಲಿಯವರೆಗೂ ಇಟ್ಟಿರುವುದರಿಂದ ಅದರ ಶಕ್ತಿ ಹೋಗಿ ಅದು ಯೂಸ್‌ಲೆಸ್ ಆಗಿಲ್ಲವೇ ?

ಶ್ರೀ ಬಿ. ಎಲ್. ಗೌಡ.— ಆ ರೀತಿ ಆಗಿಲ್ಲ.

Sri H. SIDDAVEERAPPA.—Sir, I suggest the Hon. Chair to allow half-an-hour discussion on this question tomorrow itself.

Mr. SPEAKER.—If a notice is given, I shall consider it.

Sri S. R. BOMMAI.—I want to know whether the purchases are made by the Dpartments of the Government or by the State Marketing Society; and if it is by the State Marketing Society on what basis these purchases are made?

Sri B. L. GOWDA.—All these quotas are allotted by the Government of India and the Director of Agriculture advises the Society to purchase it.

ಶ್ರೀ ಕೆ. ಹೆಚ್. ಪಾಟೀಲ್.—ಇಂತ ಸಂಘಗಳಿಂದ ದುಡ್ಡು ಹಾನಿ ಆಗುತ್ತದೆ ಎಂದು ಗೊತ್ತಿದ್ದರೂ ಸಹ ಕಾರಣಗಳನ್ನು ಹುಡುಕಲಿಕ್ಕೆ ಪ್ರಯತ್ನ ಮಾಡದೆ ಒಂದು ಕೋಟಿ ಪೊಂಭತ್ತು ಲಕ್ಷ ಎಪ್ಪತ್ತೆರಡು ಸಾವಿರದ ಏಳುನೂರು ರೂಪಾಯಿನ ಶೇರ್ ಬಂಡವಾಳವನ್ನು ಈ ಸಂಘವಲ್ಲಿ ಇನ್‌ವೆಸ್ಟ್ ಮಾಡಿದ್ದೀರಿ. ಎನ್. ಸಿ. ಡಿ. ಸಿ. ನರ್‌ಕ್ಯುಲರ್ ಪ್ರಕಾರ ಯಾವ ಪ್ರಪೋರ್ಷನ್‌ನಲ್ಲಿ ಸಂಘಗಳಿಗೆ ಹಣವನ್ನು ಕೊಡಬೇಕು ಆ ಪ್ರಪೋರ್ಷನ್‌ಲ್ಲಿ ಕೊಟ್ಟಿದ್ದೀರಾ? ಹಣ ಜಾಸ್ತಿ ಕೊಟ್ಟಿದ್ದರೆ ಅದೇ ನಿಯಮಾವಳಿಯನ್ನು ಉಳಿದ ಸಂಘಗಳಿಗೂ ಅನ್ವಯಿಸುವಂತೆ ಸರಕಾರ ಪ್ರಯತ್ನ ಮಾಡುತ್ತದೆಯೇ ?

1-30 P.M.

ಶ್ರೀ ಬಿ. ಎಲ್. ಗೌಡ.—ರೈತರ ಹಿತದೃಷ್ಟಿಯಿಂದ ಬಾರೋಯಿಂಗ್ ಕೆಪಾಸಿಟಿ ಬರಲಿ ಎನ್ನುವ ದೃಷ್ಟಿಯಿಂದ ಮಾರಾಟ ಸಂಘಕ್ಕೆ ಶೇರ್ ಕ್ಯಾಪಿಟಲ್ ಕೊಟ್ಟಿದ್ದೇವೆ. ತಾರತಮ್ಯ ಮಾಡುತ್ತೇವೆ ಎಂದು ಹೇಳುವುದಾದರೆ ಬೇರೆ ಪ್ರಶ್ನೆ ಹಾಕಿದರೆ ಯಾವರೀತಿ ತಾರತಮ್ಯವಾಗಿದೆ ಎನ್ನುವುದನ್ನು ಸರಕಾರದವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಹಕಾರ ಸಂಘ ತನ್ನ ಸ್ವಂತ ಅಭಿಪ್ರಾಯವನ್ನು ವ್ಯಕ್ತ ಪಡಿಸುವುದಕ್ಕೆ ಅವಕಾಶ ಇಲ್ಲದಹಾಗೆ ಮತ್ತು ಸರಕಾರದ ಅಭಿಪ್ರಾಯವನ್ನು ಅಲ್ಲಿಯೇ ಜಾರಿಗೆ ಕೊಡುವಹಾಗೆ ಮಾಡಿರುವುದು ನಿಜವೇ ?

ಶ್ರೀ ಬಿ. ಎಲ್. ಗೌಡ.—ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—19 ಕೋಟಿ ಚಿಲ್ಲರೆ ಬೆಲೆ ಬಾಳುವಷ್ಟು ಗೊಬ್ಬರ ಇದೆ ಎಂದು ಹೇಳಿದಿರಿ. ಅದು ಎಷ್ಟು ವರ್ಷಕ್ಕೆ ಆಗುವಷ್ಟು ಇದೆ, ಮತ್ತು ಈ ವರ್ಷದ ರಿಕ್ವೈರ್‌ಮೆಂಟ್ಸ್ ಎಷ್ಟು ?

ಶ್ರೀ ಬಿ. ಎಲ್. ಗೌಡ.—1960-61 ರಲ್ಲಿ 44,776 ಟನ್ನು ಗೊಬ್ಬರ, 1965-66 ರಲ್ಲಿ 1,22,815 ಟನ್, 1966-67 ರಲ್ಲಿ 1,47,428 ಟನ್, 1967-68 ರಲ್ಲಿ 1,51,852 ಟನ್ ಈ ರೀತಿ ಖರ್ಚಾಗಿದೆ. ಬರುಬರುತ್ತಾ ಗೊಬ್ಬರದ ಬೇಡಿಕೆ ಜಾಸ್ತಿಯಾಗುತ್ತಿದೆ. ಆದುದರಿಂದ ಹೆಚ್ಚಿನ ಸ್ಟಾಕ್ ಮಾಡಿದೆ.

Sri K. H. RANGANATH.—Hon. Minister has not stated the yearly requirements.

ಶ್ರೀ ಬಿ. ಎಲ್. ಗೌಡ.—ಎಷ್ಟು ಬೇಕು ಎಂದು ಅಂದಾಜು ಮಾಡಿ ಎಸ್ಟಿಮೇಟ್ ತರಿಸಿಕೊಂಡು ಈಗ 2,67,790 ಟನ್ ಸ್ಟಾಕ್ ಮಾಡಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ್.—ರಾಸಾಯನಿಕ ಗೊಬ್ಬರಗಳನ್ನು ಸುವ್ಯವಸ್ಥಿತ ವಾಗಿ ವಿತರಿಸಿ ಮಾಡುವ ಬಗ್ಗೆ ಪುನರ್‌ವ್ಯವಸ್ಥೆಯನ್ನು ಮಾಡುವುದಕ್ಕೆ ಸರಕಾರದವರು ಪರಿ ಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ತಾವು ಸಲಹೆ ಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಖಾಸಗೀ ಕಂಪನಿಯವರು ಅಮದು ಮಾಡಿರುವ ಗೊಬ್ಬರ ವನ್ನು ಪ್ರಭಾವಯುತವಾದ ಅಧಿಕಾರಿಗಳ ಪ್ರೇರೇಪಣೆಯಿಂದ ಸೊಸೈಟಿಗಳಿಗೆ ಕೊಟ್ಟು ಕೊಟ್ಟಾಂಶ ತರ ರೂಪಾಯಿ ಗೊಬ್ಬರ ಶೇಖರಣೆ ಮಾಡಿದ್ದಾರೆಯೇ ಇಲ್ಲವೇ ?

ಶ್ರೀ ಬಿ. ಎಲ್. ಗೌಡ.—ಆ ವಿಷಯ ನನಗೆ ಗೊತ್ತಿಲ್ಲ.

Sri H. N. NANJE GOWDA.—I refer to question No. 78. Just now I have received the statement. I want to go through that. The Hon. Chair may kindly hold over the question.

Mr. SPEAKER.—I cannot hold over the question. The hon. Member may put his question.

Sri H. N. NANJE GOWDA.— I was able to get the statements by repeated demands only just now.

ಶ್ರೀ ಎಸ್. ಗೋಪಾಲಗೌಡ.—ನನ್ನದು ಒಂದು ಕ್ರಿಯಾಲೋಪ.

Mr. SPEAKER.—It is not permitted during question hour.

COLLECTION AND REMISSION OF LAND REVENUE

78. Sri H. N. NANJE GOWDA (Arkalgud).—

Will the Minister for Revenue be pleased to state.—

(*a*) the land revenue demand in each district (figures for each year from 1956 up to the end of October, 1969 be furnished);

(*b*) the amount of land revenue collected so far and the arrears thereon in each district (figures from 1956 up to the end of October 1969 be furnished) ;

(*c*) the amount of the Remission of land revenue granted in each district (figures from 1956 up to the end of October, 1969 to be furnished) ?

Sri H. V. KOUJALGI (Minister for Revenue).—

(*a*) *Vide* Statement I placed on the Table of the House.

(*c*) *Vide* Statement II and III placed on the Table of the House.

(*c*) *Vide* Statement IV placed on the Table of the House.